# ಆಕಾಶದಿಂದ ಭೂಮಿಗೆ ನೇಯ್ದ ಜೇಡನ ಬಲೆ



ಮೂಲ: **ಆಫ್ರಿಕನ್ ಜಾನಪದ** (ಇಂಗ್ಲಿಷ್‌ನಲ್ಲಿ)
ಕನ್ನಡಕ್ಕೆ: **ಡಾ.ಕರೀಗೌಡ ಬೀಚನಹಳ್ಳಿ**
ಕಲೆ: ಮುರಳೀಧರ್ ರಾಥೋಡ್

ನಾನು ಆಗಾಗ ಕಿಮನ್ಯೂಜ್‌ನ ಮಗನ ಕಥೆಯನ್ನು ಹೇಳ್ತಾ ಇರ್ತೀನಿ ಕೇಳಿ; ಕಿಮನ್ಯೂಜ್‌ನಿಗೆ ಒಬ್ಬ ಮಗ ಹುಟ್ಟಿದ. ಅವನು ಬೆಳೆದು ದೊಡ್ಡವನಾಗಿ ಮದುವೆ ವಯಸ್ಸಿಗೆ ಬಂದ. ಆಗ ಅವನ ತಂದೆ ಅವನಿಗೆ, 'ಮದುವೆ ಆಗು' ಎಂದು ಕೇಳಿದನು. ಆಗ ಮಗ, 'ಆದರೆ ಈ ಭೂಮಿಯ ಮೇಲೆ ಇರುವ ಹುಡುಗಿಯರನ್ನು ನಾನು ಮದುವೆ ಆಗುವುದಿಲ್ಲ' ಎಂದನು.

ಆಗ ಅವನ ತಂದೆ, 'ಹಾಗಾದರೆ ನೀನು ಯಾರನ್ನು ಮದುವೆ ಆಗ್ತೀಯಾ?' ಎಂದು ಪ್ರಶ್ನಿಸಿದನು. ಮಗ, 'ನಾನು ಮದುವೆಯಾಗುವುದು ಸೂರ್ಯ-ಚಂದ್ರಮರ ಮಗಳನ್ನು. ಇದು ನನ್ನ ನಿರ್ಧಾರ' ಎಂದು ತಂದೆಗೆ ಹೇಳಿದನು.

ಆದರೆ ಆಗ ಜನ, 'ಯಾರು ಆಕಾಶಕ್ಕೆ ಹೋಗುವವರು? ಅಲ್ಲಿ ಸೂರ್ಯ-ಚಂದ್ರಮರ ಮಗಳು ವಾಸವಾಗಿದ್ದಾಳೆಯೇ?' ಎಂದು ಕೇಳಿದರು.

ಆತ ಮತ್ತೆ ನೇರವಾಗಿ, 'ಲಾರ್ಡ್ ಸೂರ್ಯ ಮತ್ತು ಲೇಡಿ ಚಂದ್ರಮರ ಮಗಳೇ ನನಗೆ ಬೇಕು. ಈ ಭೂಮಿಯ ಮೇಲೆ ಇರುವ ಹುಡುಗಿಯರನ್ನು ಮಾತ್ರ ನಾನು ಖಂಡಿತಾ ಮದುವೆ ಆಗುವುದಿಲ್ಲ' ಎಂದನು.

ಈ ಮಾತು ನಡೆದ ಮೇಲೆ ಆತ ತನ್ನ ಮದುವೆಯ ಬಗ್ಗೆ ಒಂದು ಕಾಗದವನ್ನು ಬರೆದು ಜಿಂಕೆಯ ಕೈಗೆ ಕೊಟ್ಟನು. ಆಗ ಜಿಂಕೆಯು ಅವನಿಗೆ,'ನನ್ನಿಂದ ಈ ಪತ್ರ ತಗೊಂಡು ಆಕಾಶಕ್ಕೆ ಹೋಗಲು ಸಾಧ್ಯವಾಗುವುದಿಲ್ಲ' ಎಂದು ಹೇಳಿತು.

ಅನಂತರ ಆತ ಆ ಕಾಗದವನ್ನು ಕಡವೆಯ ಕೈಗೆ ಕೊಟ್ಟು ಕೇಳಿದನು; ಆದರೆ ಕಡವೆಯೂ, 'ನನ್ನಿಂದ ಆಕಾಶಕ್ಕೆ ಹೋಗಲು ಸಾಧ್ಯವಾಗುವುದಿಲ್ಲ' ಎಂದಿತು.

ಆಮೇಲೆ ಆತ ಆ ಕಾಗದವನ್ನು ಗಿಡುಗನ ಕೈಗೆ ಕೊಟ್ಟು ಕೇಳಿದನು; ಆದರೆ ಗಿಡುಗವೂ ಮತ್ತೆ ಮತ್ತೆ, 'ನನ್ನಿಂದ ಆಕಾಶಕ್ಕೆ ಹೋಗಲು ಸಾಧ್ಯವಾಗುವುದಿಲ್ಲ' ಎಂದಿತು.

ನಂತರ ಆತ ಆ ಕಾಗದವನ್ನು ರಣಹದ್ದಿನ ಕೈಗೆ ಕೊಟ್ಟು ಕೇಳಿದನು; ಆಗ ಆ ರಣಹದ್ದು, 'ನಾನು ಆಕಾಶದ ಅರ್ಧದಾರಿವರೆಗೆ ಮಾತ್ರ ಹೋಗಬಲ್ಲೆ. ಆದರೆ ಪೂರ್ಣದಾರಿಯನ್ನು ಮುಟ್ಟಲಾರೆ' ಎಂದಿತು.